## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

ಓ.ಎಸ್. 162 /2023

ಸಾಕ್ಷಿಯನ್ನು ದಿಃ **19.09.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ 1ನೇ ಪ್ರತಿವಾದಿಯರ ಪರಃ ಶ್ರೀ. ವೈಜಿ ವಕೀಲರಿಂದ**:

ಈ ದಾವೆಯನ್ನು ವಿಭಾಗ ಕೋರಿ ಹಾಕಿದ್ದಾರೆ. ನನ್ನ ತಾತ ನಂಜಪ್ಪರವರಿಗೆ ಒಟ್ಟು 3 ಜನ ಮಕ್ಕಳು. ಮೊದಲನೇ ಮಗನ ಹೆಸರು ಕಪನಯ್ಯ ಅಂದರೆ 1ನೇ ಪ್ರತಿವಾದಿ. 2ನೇ ಮಗನ ಹೆಸರು ಬಸಪ್ಪ ಅವರು ಅಂಗವಿಕಲರಾಗಿದ್ದು, ಈಗ ಮೃತಪಟ್ಟಿದ್ದಾರೆ. 3ನೇ ಮಗ ನಂಜಪ್ಪ ಅಂದರೆ ವಾದಿ. 2ನೇ ಪ್ರತಿವಾದಿ ನಮ್ಮ ಪಕ್ಕದ ಹಳ್ಳಿಯವರು. 2ನೇ ಪ್ರತಿವಾದಿಯ ವಿರುದ್ಧ ಏನು ಪರಿಹಾರ ಕೇಳಲಾಗಿದೆ ಎಂದರೆ 1 ಎಕರೆ 1 ಗುಂಟೆ ಅವರು ಬರೆಸಿಕೊಂಡಿರುವುದು ತಪ್ಪು ಎಂದು ಪರಿಹಾರ ಕೇಳಲಾಗಿದೆ. ವಾದ ಪತ್ರದಲ್ಲಿ 1 ಎಕರೆ 1 ಗುಂಟೆ 1ನೇ ಪ್ರತಿವಾದಿ 2ನೇ ಪ್ರತಿವಾದಿಯಿಂದ ಬರೆಸಿಕೊಂಡಿರುವುದು ತಪ್ಪು ಎಂದು ಹೇಳಿದ್ದಿರಾ ಎಂದರೆ ಹೇಳಿದ್ದೇನೆ. ವಾದ ಪತ್ರದಲ್ಲಿ ನನ್ನ ತಾತ ನಂಜಪ್ಪರವರಿಗೆ 1ನೇ ಪ್ರತಿವಾದಿ ಹಿರಿಯ ಮಗ, 2ನೇ ಮಗ ಬಸಪ್ಪ ತೀರಿಹೋಗಿದ್ದಾರೆ ಮತ್ತು ವಾದಿ 3ನೇ ಮಗ ಎಂದು ಬರೆಸಿದ್ದಿರಾ ಎಂದರೆ ಬರೆಸಿದ್ದೇನೆ. ನಾನು ಯಾವುದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು ಹುಣಸೂರು ತಾಲ್ಲೂಕು ಕಚೇರಿಯ ಕಂಪ್ಯೂಟರ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಇಲ್ಲ.

ನನ್ನ ತಾತ ನಂಜಪ್ಪರವರ ಹಿರಿಯ ಮಗ ಬಸಪ್ಪ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಹಿರಿಯ ಮಗನಾಗಿದ್ದಾರೆ. ನಿಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದಿರಾ ಎಂದರೆ ಇಲ್ಲ. ನನ್ನ ತಾತ ನಂಜಪ್ಪರವರ ಹಿರಿ ಮಗ ಬಸಪ್ಪ ನಂತರ 1ನೇ ಪ್ರತಿವಾದಿ, ಕೊನೆಯವರು ನನ್ನ ತಂದೆ ವಾದಿ ಎಂದರೆ ಸರಿಯಲ್ಲ. ನನ್ನ ತಾತ ತೀರಿಹೋದ ನಂತರ ನನ್ನ ತಂದೆ, 1ನೇ ಪ್ರತಿವಾದಿ ಮತ್ತು ಬಸಪ್ಪ ರವರು ಒಂದೇ ಕುಟುಂಬದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಂತರ ನನ್ನ ದೊಡ್ಡಪ್ಪ ಬಸಪ್ಪರವರು ಕುಟುಂಬದ ನಿರ್ವಹಣೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. 1995-96ನೇ ಸಾಲಿನಲ್ಲಿ ಬಸಪ್ಪರವರು ತನ್ನ ನಂತರ ಆಸ್ತಿಗಳ ವಿಲೇವಾರಿಯ ಬಗ್ಗೆ ನೋಂದಾಯಿತ ಮೃತ್ಯು ಪತ್ರ ಬರೆಸಿದ್ದರು ಎಂದರೆ ಸರಿಯಲ್ಲ. ಮೃತ್ಯು ಪತ್ರದ ಪ್ರಕಾರ

ವಿಭಾಗ ಮಾಡಿಕೊಳ್ಳದೇ ನನ್ನ ತಂದೆ ಮತ್ತು 1ನೇ ಪ್ರತಿವಾದಿ ಸಮವಾಗಿ ಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಬಗ್ಗೆ ಈಗ ಪಹಣಿ ಮತ್ತು ಕಂದಾಯ ದಾಖಲೆಗಳು ಬದಲಾಗಿವೆ ಎಂದರೆ ಸಾಲ ಪಡೆದುಕೊಳ್ಳುವ ಸಲುವಾಗಿ ಮಾಡಿಕೊಂಡಿದ್ದು ಕ್ರಮಬದ್ಧವಾಗಿ ಭಾಗವಾಗಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿ ಮನೆ ಮತ್ತು ಬ್ಯಾರನ್ ಲೈಸೆನ್ಸ್ ಇದೆ ಎಂದರೆ ನನ್ನ ತಂದೆಯ ಹೆಸರಿನಲ್ಲಿ ಇಲ್ಲ 1ನೇ ಪ್ರತಿವಾದಿ ಹಿರಿಯ ಮಗನಾದ ಕಾರಣ ಅವರ ಹೆಸರಿನಲ್ಲಿಯೇ ಮಾಡಿಕೊಂಡಿದ್ದರು. ನನ್ನ ತಂದೆಯ ಹೆಸರಿನಲ್ಲಿ ವಾಸದ ಮನೆ ಇದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಐಟಂ ನಂ.2ರ ಬಗ್ಗೆ ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ನಿಪಿ-4 ನ್ನು ಹಾಜರುಪಡಿಸಿದ್ದೇನೆ. ನಿಪಿ-4 ರಲ್ಲಿ ಚೆಲುವೆಗೌಡ, ಕಪನಯ್ಯ, ಸ್ವಾಮಿ ಬಿನ್ ನಂಜಪ್ಪ, ಹರದೂರೆಗೌಡ ಎಂಬ ಹೆಸರು ಇದೆ ಎಂದರೆ ಸರಿ. ಸದರಿ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹರದೂರೆಗೌಡರ ಮಗನೇ 2ನೇ ಪ್ರತಿವಾದಿ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-4 ರಲ್ಲಿರುವ ಚೆಲುವೇಗೌಡ ಮತ್ತು ಸ್ವಾಮಿರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ದಾವಾ ಐಟಂ ನಂ.1 ರ ಬಗ್ಗೆ ಯಾವಾ ದಾಖಲೆ ಹಾಜರುಪಡಿಸಿದ್ದಿರಿ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ನಿಪಿ-13 ನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-14 ರಲ್ಲಿ ನನ್ನ ತಂದೆಯ ಹೆಸರು ಇದೆ ಎಂದರೆ ಸರಿ. ನಿಪಿ-13ರ ಪ್ರಕಾರ 1ನೇ ಪ್ರತಿವಾದಿಯ ಹೆಸರಿನಲ್ಲಿ 13 ಗುಂಟೆ ಇದೆ ಎಂದರೆ ಸರಿ. ನಿಪಿ-13 ಮತ್ತು 14 ರ ಪ್ರಕಾರ ವಿಭಾಗ ಮಾಡಿಕೊಂಡು ನಮ್ಮ ಆಸ್ತಿಯನ್ನು ನಾವು, 1ನೇ ಪ್ರತಿವಾದಿಯ ಆಸ್ತಿಯನ್ನು ಅವರು ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ದಾವ ಐಟಂ ನಂ.2ರ ಈಗಿನ ಪಹಣಿಯನ್ನು ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ನಿಪಿ-8 ನ್ನು ತೋರಿಸುತ್ತಾರೆ. ನಿಪಿ-8ರ ಪ್ರಕಾರ ಈಗ 24 ಗುಂಟೆ ಜಮೀನು ಇದೆ ಎಂದರೆ ಸರಿ. ದಿಃ 29.12.2015 ರಂದು ದಾವಾ ಐಟಂ ನಂ.2ರ ಪೈಕಿ 1 ಎಕರೆ 1 ಗುಂಟೆಯನ್ನು 1ನೇ ಪ್ರತಿವಾದಿ ನಿಂಗಮ್ಮ ಮತ್ತು 2ನೇ ಪ್ರತಿವಾದಿಯಿಂದ ಕ್ರಯಕ್ಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಆರ್.ಬಿ ಪುಟ್ಟಣ್ಣಯ್ಯ ಮತ್ತು ಬಸವಯ್ಯರವರ ಜಮೀನು ಎಂದರೆ ಸರಿ. ಉತ್ತರಕ್ಕೆ 1ನೇ ಪ್ರತಿವಾದಿಯವರ ಜಮೀನು ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಜಮೀನು ಕೂಡ ಇದೆ. ದಕ್ಷಿಣಕ್ಕೆ 1ನೇ ಪ್ರತಿವಾದಿಯ ಜಮೀನು ಎಂದರೆ ನನ್ನ ತಂದೆ ಮತ್ತು 1ನೇ ಪ್ರತಿವಾದಿಗೆ ಸೇರಿದ ಜಮೀನುಗಳು ಇವೆ.

1ನೇ ಪ್ರತಿವಾದಿ 1 ಎಕರೆ 1 ಗುಂಟೆಯನ್ನು ಕ್ರಯಕ್ಕೆ ಪಡೆದುಕೊಂಡ ನಂತರ ನನ್ನ ತಂದೆ ಸದರಿ ಜಮೀನನ್ನು ಖಾತೆ ಮಾಡದಂತೆ ತಹಶೀಲ್ದಾರ್ ರವರಿಗೆ ತಕರಾರು ಸಲ್ಲಿಸಿದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಈಗ ತೋರಿಸುತ್ತಿರುವ ದಾಖಲೆ 1ನೇ ಪ್ರತಿವಾದಿ ಸಲ್ಲಿಸಿದ RRT 133/2016-17ರಲ್ಲಿ ಆದ ಆದೇಶದ ದೃಡೀಕೃತ ನಕಲು ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಆದೇಶದ ನಂತರ 1ನೇ ಪ್ರತಿವಾದಿಯ ಹೆಸರಿಗೆ ಈಗ ತೋರಿಸುತ್ತಿರುವ ಪಹಣಿ ಆಯಿತು ಎಂದರೆ ಸರಿ. ಸದರಿ ಪಹಣಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಂತರ 1ನೇ ಪ್ರತಿವಾದಿ ಕಟ್ಟೆಮಳಲವಾಡಿಯ IOB ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಇರಬಹುದು. 1ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿ ಅವರು ವ್ಯವಸಾಯ ಮಾಡುವಾಗ ನಾನು ಮತ್ತು ನನ್ನ ತಂದೆ ನಿರಂತರವಾಗಿ ಅವರಿಗೆ ತೊಂದರೆ ಕೊಡುತ್ತಾ ಬರುತ್ತಿದ್ದೇವೆ ಎಂದರೆ ಸರಿಯಲ್ಲ. ಈ ಸಂಬಂಧ ನನ್ನ ಮತ್ತು ನನ್ನ ತಂದೆಯ ವಿರುದ್ಧ 1ನೇ ಪ್ರತಿವಾದಿ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಹಲವಾರು ಬಾರಿ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ಪೋಲಿಸರು ಯಾವುದೇ ಕ್ರಮ ಕೈಗೊಳ್ಳದ ಕಾರಣ 1ನೇ ಪ್ರತಿವಾದಿ ನಮ್ಮ ವಿರುದ್ಧ ಹುಣಸೂರು ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಃ 247/2020 ನ್ನು ಖಾಯಂ ಪ್ರತಿಬಂಧಕಾಜ್ಞೆ ಕೋರಿ ಸಲ್ಲಿಸಿದ್ದಾರೆ ಎಂದರೆ ಆ ಬಗ್ಗೆ ಸರಿಯಾಗಿ ಗೊತ್ತಿಲ್ಲ. ಅದರಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶ ಹೊರಡಿಸಿದೆ ಎಂದರೆ ಗೊತ್ತಿಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನನ್ನ ತಂದೆ ಹುಣಸೂರು ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ MA No. 15/2022 ಅನ್ನು ಸಲ್ಲಿಸಿದರು ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ದಿಃ 29.08.2023 ರಂದು ವಜಾಗೊಂಡಿತ್ತು ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಕೂಡ 1 ಎಕರೆ 1 ಗುಂಟೆಯನ್ನು ಲಪಟಾಯಿಸಬೇಕೆಂದು ನಾನು ತಂದೆಯ ಮೂಲಕ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ವಾದಿ 1ನೇ ಪ್ರತಿವಾದಿಗಿಂತ ವಯಸ್ಸಿನಲ್ಲಿ ಚಿಕ್ಕವರು. ನನ್ನ ತಂದೆ ಊರಿನಲ್ಲಿ ಓಡಾಡಿಕೊಂಡು ದನ, ಕರು ಮೇಯಿಸಿಕೊಂಡು ಆರಾಮವಾಗಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಆರೋಗ್ಯವಾಗಿ ಚೆನ್ನಾಗಿದ್ದರೂ ಕೂಡ ಅವರು ಬಂದು ಸಾಕ್ಷಿ ನುಡಿದರೇ ನಿಜಾಂಶ ತಿಳಿಯುತ್ತದೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.